ದಿನಾಂಕಃ 13–12–2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ</u>– ಪ್ರತಿವಾದಿ ಪರವಾಗಿ ಶ್ರೀ.ಎನ್.ಎಸ್. ವಕೀಲರಿಂದಃ–**

ಈ ದಾವೆಯನ್ನು ಏಕೆ ಹಾಕಿದ್ದೀರಾ ಎಂದರೆ ಸಾಕ್ಷಿಯು ನನ್ನ ಮಗಳು ಮೃತ ಪಟ್ಟಿದ್ದು ನನಗೂ ಮತ್ತು ನನ್ನ ಮೊಮ್ಮಕ್ಕಳಿಗೆ ಆಸ್ತಿ ಬೇಕು ಎಂದು ದಾವೆ ಹಾಕಿರುತ್ತೇನೆ. ನನ್ನ ಮದುವೆ ಯಾವಾಗ ಆಯಿತು ಎಂದರೆ ಗೊತ್ತಿಲ್ಲ. ನಾವು ಈಗಲೂ ಕೂಡ ಗಂಡನ ಜೊತೆಯಲ್ಲೇ ಇದ್ದೇನೆ. ಆದರೆ ನಾನು ಒಂದು ಭಾಗದಲ್ಲಿದ್ದು ಅವರ ಚಿಕ್ಕ ಹೆಂಡತಿ ಇನ್ನೊಂದು ಭಾಗದಲ್ಲಿ ಇದ್ದಾರೆ. ನಾನು ಗಂಡನನ್ನು ಬಿಟ್ಟು 19 ವರ್ಷವಾಗಿದೆ ಎಂದರೆ ಸರಿಯಲ್ಲ. ನಮ್ಮ ಮತ್ತು ಪ್ರತಿವಾದಿಯರ ನಡುವೆ ಯಾವುದೇ ವಿಭಾಗ ಆಗಿರುವುದಿಲ್ಲ ಆದರೆ ಅವಳು ಅಲ್ಲಿರಲಿ ಎಂದು ಮನೆಯಲ್ಲಿ ಪ್ರತ್ಯೇಕವಾಗಿ ಬಿಟ್ಟಿರುತ್ತಾರೆ. ನನ್ನ ಜೀವನಕ್ಕಾಗಿ 8 ಗುಂಟೆ ಅಡಿಕೆ ತೋಟ ಬಿಟ್ಟಿರುತ್ತಾರೆ. ಅದರಲ್ಲಿ 170 ಗಿಡಗಳು ಇರಬಹುದು. 8 ಗುಂಟೆ ಸಾಲುವುದಿಲ್ಲ ಎಂದು ನಾನು ಗಂಡನ ಹತ್ತಿರ ಭಾಗ ಕೇಳಿದಾಗ ಅವರು ಕೊಡಲ್ಲ ಎಂದು ಹೇಳಿರುತ್ತಾರೆ ಹಾಗಾಗಿ ಈ ದಾವೆಯನ್ನು ಹಾಕಿರುತ್ತೇನೆ.

ದಾವಾ ಆಸ್ತಿಗಳು ಮೂಲತಃ ನಮ್ಮ ಮಾವ ಹನುಮಂತರಾಯಪ್ಪನವರಿಗೆ ಸೇರಿದ್ದು. ನನ್ನ ಮಾವನಿಗೆ ಸದರಿ ಆಸ್ತಿಗಳು ಹೇಗೆ ಬಂತು ಎಂದು ಗೊತ್ತಿಲ್ಲ. ನನ್ನ

ಮಾವ ಇಬ್ಬರು ಅಣ್ಣ ತಮ್ಮಂದಿರು. ನನ್ನ ಮಾವನ ಅಣ್ಣನ ಹೆಸರು ನರಸಿಂಹಪ್ಪ. ನನ್ನ ಅತ್ತೆಯ ಹೆಸರು ಸಣ್ಣಮ್ಮ. ನನ್ನ ಅತ್ತೆ ಮತ್ತು ಮಾವನಿಗೆ ಒಟ್ಟು ಆರು ಜನ ಮಕ್ಕಳು. ಅವರೆಂದರೆ ನರಸಮ್ಮ, ಪುಟ್ಟತಾಯಮ್ಮ, ಹನುಮಕ್ಕ, ಗೌರಮ್ಮ, ನರಸಿಂಹಣ್ಣ, ಭೀಮಣ್ಣ. ದಾವಾ ಆಸ್ತಿಗಳು ಈಗ ಯಾರ ಹೆಸರಿನಲ್ಲಿವೆ ಎಂದರೆ ಗೊತ್ತಿಲ್ಲ. ನರಸಮ್ಮನಿಗೆ ಗಂಡ ಮತ್ತು ಮಕ್ಕಳಿಲ್ಲ. ಪುಟ್ಟತಾಯಮ್ಮನಿಗೆ ಇಬ್ಬರು ಹೆಣ್ಣು ಒಬ್ಬ ಗಂಡು ಮಗ. ಗೌರಮ್ಮ ಮೃತ ಪಟ್ಟಿರುತ್ತಾರೆ, ಅವರಿಗೆ ಇಬ್ಬರು ಗಂಡು ಮಕ್ಕಳು ಅವರೆಂದರೆ ರಾಮಕೃಷ್ಣಪ್ಪ ಮತ್ತು ಮಧು. ನರಸಿಂಹಪ್ಪನಿಗೆ ಇಬ್ಬರು ಮಕ್ಕಳು, ಅವರೆಂದರೆ ನಟರಾಜು ಮತ್ತು ಅನ್ನಪೂರ್ಣ.

ನನ್ನ ಮಾವ ಮತ್ತು ಅವರ ಅಣ್ಣ ನರಸಿಂಹಪ್ಪನವರ ನಡುವೆ ವಿಭಾಗ ಆಗಿತ್ತಾ ಎಂದರೆ ಹೌದು. ಯಾವ ವರ್ಷ ಎಂದರೆ ಗೊತ್ತಿಲ್ಲ. ನರಸಿಂಹಯ್ಯ ಮತ್ತು ನನ್ನ ಮಾವನ ನಡುವೆ ಯಾವುದೇ ಭಾಗ ಆಗಿಲ್ಲ ಎಂದರೆ ಸರಿಯಲ್ಲ. ಅವರ ನಡುವೆ ವಿಭಾಗ ಆಗಿತ್ತು ಎಂದು ತೋರಿಸಲು ಏನಾದರೂ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ದಾವೆಯಲ್ಲಿ ಏನೇನು ದಾಖಲೆ ಹಾಜರುಪಡಿಸಿದ್ದೇನೆ ಎಂದರೆ ಗೊತ್ತಿಲ್ಲ. ನನಗೆ ಓದಲು ಬರುವುದಿಲ್ಲ. ಸಾಕ್ಷಿಗೆ ನಿಪಿ.2 ಪಹಣಿಯನ್ನು ತೋರಿಸಿ ದಾವಾ ಐಟಂ ನಂಬರ್ 1 ಯಾರ ಹೆಸರಿಗೆ

ಇದೆ ಎಂದರೆ ಗೊತ್ತಿಲ್ಲ. ಸದರಿ ಆಸ್ತಿಯು ರಾಮಚಂದ್ರಪ್ಪ ಬಿನ್ ನರಸಪ್ಪ ಹಾಗೂ ಸಣ್ಣಮ್ಮ ಕೋಂ ಹನುಮಂತರಾಯಪ್ಪನವರ ಹೆಸರಿನಲ್ಲಿದೆ ಎಂದರೆ ಗೊತ್ತಿಲ್ಲ. ಸದರಿ ಪಹಣಿಯಲ್ಲಿ ಭೀಮಣ್ಣನ ಹೆಸರು ಬರೆದಿಲ್ಲ ಎಂದರೆ ಸಾಕ್ಷಿಯು ಅವರಿಗೆ ಹಿಸ್ಸೆ ಬರಬೇಕು ಎಂದು ಹೇಳುತ್ತಾರೆ. ಸಣ್ಣಮ್ಮ ಮತ್ತು ಹನುಮಂತರಾಯಪ್ಪನಿಗೆ ಆರು ಜನ ಮಕ್ಕಳಿದ್ದು ನಾನು ಈ ದಾವೆಯಲ್ಲಿ ನರಸಮ್ಮ, ಪುಟ್ಟತಾಯಮ್ಮ, ಗೌರಮ್ಮ ಮತ್ತು ನರಸಿಂಹಪ್ಪರವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನಮಗೆ 8 ಗುಂಟೆ ಬಿಟ್ಟು ಕೊಟ್ಟಿದ್ದಾರೆ ಎಂದು ಹೇಳಿದ್ದು ಅದರ ಸರ್ವೆ ನಂಬರ್ ಗೊತ್ತಿಲ್ಲ.

ಸಾಕ್ಷಿಗೆ ನಿಪಿ.3 ಪಹಣಿಯನ್ನು ತೋರಿಸಿ ಅದರಲ್ಲಿ ಸರ್ವೆ ನಂಬರ್ 8/5 ರ ಕಲಂ ನಂಬರ್ 9 ರಲ್ಲಿ ಎಸ್.ಬಿ.ವೀರಣ್ಣ ಬಿನ್ ಲೇಟ್ ವೀರಕ್ಯಾತಪ್ಪ ಮತ್ತು ಲಕ್ಷ್ಮಮ್ಮ ಕೋಂ ಎಸ್.ಕೆ.ರಂಗಪ್ಪ ಎಂದು ನಮೂದಾಗಿದ್ದು ಅವರಿಬ್ಬರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನಿಪಿ.4 ಸರ್ವೆ ನಂಬರ್ 10/2 ಎ ಪಹಣಿಯ ಕಲಂ ನಂಬರ್ 9 ರಲ್ಲಿ ರಾಜಮ್ಮ ಕೋಂ ಲೇಟ್ ರಾಮಣ್ಣ ಎಂದು ನಮೂದಾಗಿದ್ದು ಅವರು ಯಾರೆಂದರೆ ನನ್ನ ಮಾವನ ಅಣ್ಣನ ಸೊಸೆ. ಅದೇ ಪಹಣಿಯಲ್ಲಿ ಕೆ.ರಾಮಚಂದ್ರಪ್ಪ ಬಿನ್ ನರಸಪ್ಪ ಎಂದು ನಮೂದಾಗಿರುವ ಹೆಸರು ಯಾರೆಂದರೆ ನನ್ನ ಮಾವನ ಅಣ್ಣನ ಮಗ. ಸದರಿಯವರನ್ನು ಈ ದಾವೆಯಲ್ಲಿ

ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನಿಪಿ.11, ಸರ್ವೆ ನಂಬರ್ 44/4 ರಲ್ಲಿ ನನ್ನ ಅತ್ತೆ ಸಣ್ಣಮ್ಮನ ಹೆಸರಿನಲ್ಲಿ 21 ಗುಂಟೆ ಇದೆ ಎಂದರೆ ಸರಿ.

ಈ ಹಂತದಲ್ಲಿ ವಕೀಲರ ವಿನಂತಿ ಮೇರೆಗೆ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ .